# ಚಳವಳಿಯ ನೆನಪು; ಪ್ರಣಯದ ಹೊಳಪು

**ವಿಜಯ್ ನಾಗೇಂದ್ರ ನಿರ್ದೇಶನದ 'ಗೀತಾ' ಸಿನಿಮಾ ಸೆಪ್ಟೆಂಬರ್ 27ರಂದು ಬಿಡುಗಡೆಯಾಗುತ್ತಿದೆ. ಗೋಕಾಕ್ ಚಳವಳಿಯ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಸಿನಿಮಾದಲ್ಲಿ ಗಣೇಶ್ ಕನ್ನಡದ ಕಟ್ಟಾಳಾಗಿ ಕಾಣಿಸಿಕೊಂಡಿದ್ದಾರೆ.**

■ **ಪದ್ಮನಾಭ ಭಟ್**



◆ **'ಗೀತಾ' ಸಿನಿಮಾದ ವಿಶೇಷಗಳೇನು? ನಿಮ್ಮ ಪಾತ್ರದ ಕುರಿತು ಹೇಳಿ.**

ಇದು ತುಂಬ ವಿಶಿಷ್ಟವಾದ ಪಾತ್ರ. ಎಲ್ಲೋ ಅಪರೂಪಕ್ಕೆ ಇಂಥ ಪಾತ್ರಗಳಲ್ಲಿ ನಟಿಸುವ ಅವಕಾಶ ಸಿಗುತ್ತದೆ. ಎಂಬತ್ತರ ದಶಕದ ಗೋಕಾಕ್ ಚಳವಳಿ ಹಿನ್ನೆಲೆಯಲ್ಲಿ ಇದುವರೆಗೆ ಯಾರೂ ಸಿನಿಮಾ ಮಾಡಿರಲಿಲ್ಲ. 'ಗೀತಾ' ಗೋಕಾಕ್ ಚಳವಳಿ ಹಿನ್ನೆಲೆಯಲ್ಲಿ ಕಟ್ಟಿರುವ ಸಿನಿಮಾ. ನಿರ್ದೇಶಕ ವಿಜಯ್ ನಾಗೇಂದ್ರ ನನಗೆ ಕಥೆ ಹೇಳಿದಾಗ ಸಖತ್ ಥ್ರಿಲ್ ಆಯ್ತು. ಯಾಕೆಂದರೆ ನಾನು 'ಗೋಕಾಕ್' ಚಳವಳಿಯನ್ನು ನೋಡಿಲ್ಲ. ಆದರೆ ಅದರ ಬಗ್ಗೆ ಸಾಕಷ್ಟು ಕೇಳುತ್ತಲೇ ಬೆಳೆದವನು. ಅದರ ಕಥೆ ಎಂದು ಕೇಳಿದಾಕ್ಷಣ ಒಪ್ಪಿಕೊಂಡೆ.

ಆದರೆ ಚಳವಳಿಯ ಕುರಿತು ಹೇಳುವಾಗ ಅದು ಸಾಕ್ಷ್ಯಚಿತ್ರದ ರೀತಿಯಲ್ಲಿ ಇರಬಾರದು ಎಂಬ ಎಚ್ಚರವೂ ನಮಗಿತ್ತು. ಮೊದಲಿಗೆ ಚಳವಳಿಯ ದೃಶ್ಯಗಳನ್ನು ಹದಿನೈದು ನಿಮಿಷ ಮಾಡಬೇಕು ಎಂದುಕೊಂಡಿದ್ದೆವು. ನಂತರ ಇಂಥ ಅವಕಾಶ ಮತ್ತೆ ಸಿಗುವುದಿಲ್ಲ ಎಂದು ಒಂದು ತಾಸು ವಿಸ್ತರಿಸಿದೆವು. ಎರಡು ವರ್ಷ ಸಂಶೋಧನೆ ಮಾಡಿದೆವು. ಚಿತ್ರದಲ್ಲಿ ಒಂದು ತಾಸು ಗೋಕಾಕ್ ಚಳವಳಿಯ ದೃಶ್ಯಾವಳಿಗಳಿರುತ್ತವೆ. ಉಳಿದಂತೆ ಒಂದು ಪ್ರೇಮಕಥೆ, ಕೌಟುಂಬಿಕ ಕಥನ, ಮನರಂಜನೆ ಎಲ್ಲವೂ ಇರುವ ಹಾಗೆಯೇ ಸಿನಿಮಾ ಮಾಡಿದ್ದೇವೆ.

◆ **ಎಂಬತ್ತರ ದಶಕದ ಕಥೆ ಇಂದಿನ ಹೊಸ ಪೀಳಿಗೆಗೆ ಇಷ್ಟವಾಗುತ್ತದೆಯೇ?**

'ಭಗತ್ ಸಿಂಗ್' ಅನ್ನು ನಾವ್ಯಾರೂ ನೋಡಿರಲಿಲ್ಲ; ಆದರೆ ಕೇಳಿದ್ದೆವು. 'ಲಗಾನ್' ಸಿನಿಮಾ ಕೂಡ ಹೀಗೆಯೇ ನಾವು ನೋಡಿರದ ಕಾಲದ ಕತೆ. ಆದರೆ ಆ ಸಿನಿಮಾಗಳು ಎಲ್ಲರಿಗೂ ಇಷ್ಟವಾಗಲಿಲ್ಲವೇ? ನಾವು ಕೇಳಿದ ಘಟನೆಯನ್ನು ತೆರೆಯ ಮೇಲೆ ನೋಡುವ ಅನುಭವವೇ ಬೇರೆ ಆಗಿರುತ್ತದೆ. ಗೋಕಾಕ್ ಚಳವಳಿಯೂ ಹಾಗೇ. ಅದು ಕರ್ನಾಟಕದಲ್ಲಿ ನಡೆದ ಬಹುದೊಡ್ಡ ಚಳವಳಿ. ಅದರ ಕುರಿತು ಕುತೂಹಲವಂತೂ ಇರುತ್ತದೆ. ಅಲ್ಲದೆ ಇದು ಬರೀ ಚಳವಳಿ ಕುರಿತಾಗಿಯೇ ಇರುವ ಸಿನಿಮಾ ಅಲ್ಲ. ಸಿನಿಮಾದ ಒಂದು ಭಾಗವಾಗಿ ಚಳವಳಿ ಬರುತ್ತದೆ. ಮಿಕ್ಕಿದಂತೆ ಎಲ್ಲ ಮನರಂಜನಾ ಅಂಶಗಳೂ ಇದ್ದೇ ಇರುತ್ತವೆ.

◆ **ಆ ಕಾಲಘಟ್ಟವನ್ನು ಹೇಗೆ ಮರುಸೃಷ್ಟಿಸಿದಿರಿ?**

ಸಾಕಷ್ಟು ಮಾಹಿತಿ ಕಲೆಹಾಕಿದ್ದೆವು. ಗೋಕಾಕ್ ಚಳವಳಿ ಸಂಬಂಧಿಸಿದಂತೆ ಒಂದಿಷ್ಟು ವಿಡಿಯೊ ದೃಶ್ಯಾವಳಿಗಳು ಸಿಕ್ಕಿದವು. ಆವಾಗ ಮನೋಹರ್ ಎನ್ನುವ ಒಬ್ಬರು ಗೋಕಾಕ್ ಚಳವಳಿ ಜಾಥಾದ ವಿಡಿಯೊಗಳನ್ನು ಮಾಡಿಟ್ಟುಕೊಂಡಿದ್ದರಂತೆ. ನಾವು ಅವರನ್ನು ಸಂಪರ್ಕಿಸಿ ಆ ವಿಡಿಯೊಗಳನ್ನು ನೋಡಿದೆವು. ಕನ್ನಡದ ದಿಗ್ಗಜ ನಟರು, ಸಾಹಿತಿಗಳು, ಮುಖಂಡರು ಎಲ್ಲರನ್ನೂ ನೋಡಿ ನಮಗೆ ಥ್ರಿಲ್ ಆಗೋಯ್ತು. ಅವನ್ನು ಬಳಸಿಕೊಂಡೆವು. ಆ ಚಳವಳಿಯಲ್ಲಿ ಮೈಸೂರಿನ ಕನ್ನಡದ ಕಟ್ಟಾಳು ಪಾತ್ರದಲ್ಲಿ ನಾನು ಕಾಣಿಸಿಕೊಂಡಿದ್ದೇನೆ.

ಸುಮಾರು ನಾಲ್ಕುನೂರು ಜ್ಯೂನಿಯರ್ ಆರ್ಟಿಸ್ಟ್‌ಗಳು, ಆಗಿನ ಕಾಲದ ಎತ್ತಿನಗಾಡಿ, ಬೈಕ್‌ಗಳು, ಮನೆಗಳು ಎಲ್ಲವನ್ನೂ ಬಳಸಿಕೊಂಡು ಈ ಸಿನಿಮಾ ಕಟ್ಟಿದ್ದೇವೆ. ಸಾಕಷ್ಟು ಸವಾಲುಗಳು ಇದ್ದವು. ಸಾಕಷ್ಟು ಕಷ್ಟಪಟ್ಟೇ ಮಾಡಿದ್ದೇವೆ.

◆ **ಸಿನಿಮಾದಲ್ಲಿ ಮೂವರು ನಾಯಕಿಯರು. ಈ ಸಿನಿಮಾದಲ್ಲಿಯೂ ನೀವು ಭಗ್ನಪ್ರೇಮಿಯಾಗಿ ಕಾಣಿಸಿಕೊಳ್ಳುತ್ತಿದ್ದೀರೇ?**

ಈ ಸಿನಿಮಾ ಕಥೆ ಸಾಗುವ ರೀತಿಯೇ ಬೇರೆ ಇದೆ. ಎರಡು ಕಾಲಘಟ್ಟದಲ್ಲಿ ನಡೆಯುವ ಕಥೆ. ಪ್ರೇಮದ ನೋವು, ಫ್ಯಾಮಿಲಿ ಡ್ರಾಮಾ, ಕ್ರಾಂತಿಕಾರಿ ಹೋರಾಟಗಾರನ ಕೆಚ್ಚು ಈ ಎಲ್ಲವನ್ನೂ ಮಿಕ್ಸ್ ಮಾಡಿ 'ಗೀತಾ' ಮಾಡಿದ್ದೇವೆ.

◆ **'ಗೀತಾ' ಎಂದು ಹೆಸರಿಡಲು ಏನು ಕಾರಣ?**

ನಾವು ಕನ್ನಡ ಚಳವಳಿಯ ಕುರಿತ ಹೆಸರನ್ನೇ ಇಟ್ಟರೆ ಪೂರ್ತಿ ಸಿನಿಮಾ ಅದನ್ನೇ ಮಾಡಬೇಕಾಗುತ್ತದೆ. ಹಾಗಾಗಿ ಬೇರೆ ಹೆಸರು ಇಟ್ಟು ಚಳವಳಿಯ ಅಂಶಗಳನ್ನೂ ಇಟ್ಟುಕೊಂಡಿದ್ದೇವೆ. ಎಂಬತ್ತರ ದಶಕ, ಚಳವಳಿ, ಇಂದಿನ ಕಾಲಘಟ್ಟ ಈ ಮೂರು ಅಂಶಗಳನ್ನು ಸೇರಿಕೊಂಡು ಮಾಡಿರುವ ಕಥೆಗೆ 'ಗೀತಾ' ಸರಿಯಾಗಿ ಹೊಂದುತ್ತದೆ ಅನಿಸಿತು. ಅಲ್ಲದೆ 'ಗೀತಾ ಗೀತಾ' ಹಾಡನ್ನೂ ಬಳಸಿಕೊಂಡಿದ್ದೇವೆ. ಹಾಗಾಗಿ ಅದೇ ಹೆಸರಿಟ್ಟೆವು.

ಸಿನಿಮಾ ಮನರಂಜನೆ ನಿಜ. ವ್ಯಾಪಾರವೂ ಹೌದು. ಅದರೊಟ್ಟಿಗೇ ಸ್ವಲ್ಪ ಕನ್ನಡ ಸೇವೆಯನ್ನೂ ಮಾಡಬೇಕು ಎನ್ನುವ ಉದ್ದೇಶದಿಂದ 'ಗೀತಾ' ರೂಪುಗೊಂಡಿದೆ. ಜನರಿಗೆ ಇಷ್ಟವಾಗುತ್ತದೆ ಎಂಬ ನಂಬಿಕೆಯೂ ಇದೆ. ■